

# ಇವೆಂಟ್ ಮ್ಯಾನೇಜ್‌ಮೆಂಟ್ ಇಲ್ಲಿದೆ ವಿಪುಲ ಅವಕಾಶ

■ ಮಾನಸ ಕೀಲಾರ

ಪ್ರಶಸ್ತಿ ಪ್ರದಾನ ಸಮಾರಂಭಗಳು, ಪಂಚತಾರಾ ಹೋಟೆಲ್‌ಗಳಲ್ಲಿ ನಡೆಯುವ ಸಮಾರಂಭಗಳನ್ನು ಟಿ.ವಿ ಪರದೆಯಲ್ಲಿ ನೋಡಿದಾಗ 'ಎಷ್ಟು ಅಚ್ಚುಕಟ್ಟಾಗಿ ನಡೆಸಿದ್ದಾರಲ್ಲ..!' ಎಂದು ಅನ್ನಿಸುತ್ತದೆ. ಅಚ್ಚುಕಟ್ಟಾಗಿ ಕಾರ್ಯಕ್ರಮಗಳನ್ನು ನಿರ್ವಹಿಸುವುದೂ ಒಂದು ವಿದ್ಯೆ. ಪ್ರತಿಯೊಂದು ಸೂಕ್ಷ್ಮ ವಿಷಯಗಳನ್ನು ಗಮನದಲ್ಲಿ ಇರಿಸಿಕೊಂಡು ಪರದೆ ಹಿಂದೆ ಕೆಲಸ ನಿರ್ವಹಿಸುವುದೇ 'ಇವೆಂಟ್ ಮ್ಯಾನೇಜ್‌ಮೆಂಟ್'.

ಈ ವೃತ್ತಿ ಇಂದು ಯುವಜನರನ್ನು ಆಕರ್ಷಿಸುವುದರೊಂದಿಗೆ, ಗ್ಲಾಮರಸ್ ವೃತ್ತಿಯಾಗಿಯೂ ಬೆಳೆಯುತ್ತಿದೆ. ಹಣ ಹೂಡಿಕೆಯೂ ಹೆಚ್ಚು. ಕಠಿಣ ಶಿಸ್ತು, ಸೂಕ್ಷ್ಮವಾಗಿ ಪ್ರತಿಯೊಂದನ್ನು ಗ್ರಹಿಕೆ ಮಾಡುವ ಸಾಮರ್ಥ್ಯ ನಿಮ್ಮಲ್ಲಿದ್ದರೆ ನೀವೂ ಈ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ಒಂದೊಂದು ಕಾರ್ಯಕ್ರಮವೂ ಅದರ ಸ್ವರೂಪದಲ್ಲಿ ವಿಭಿನ್ನವೇ. ಗ್ರಾಹಕನ ಸಮಾರಂಭದ ಆಲೋಚನೆಗಳನ್ನು ವಿಭಿನ್ನವಾಗಿ, ಅಚ್ಚುಕಟ್ಟಾಗಿ ಜಾರಿಗೊಳಿಸುವುದು ಇವೆಂಟ್ ಮ್ಯಾನೇಜ್‌ಮೆಂಟ್ ತಂಡದ ಕೆಲಸ. ಇವೆಂಟ್ ಏನು ಬೇಕಾದರೂ ಇರಬಹುದು; ಸಂಗೀತ ಕಚೇರಿ, ಉತ್ಪನ್ನವನ್ನು ಮಾರುಕಟ್ಟೆಗೆ ಪರಿಚಯಿಸುವುದು ಅಥವಾ ಟಿವಿ ಸಂಬಂಧಿ ಕಾರ್ಯಕ್ರಮ, ಹುಟ್ಟು ಹಬ್ಬ– ಹೀಗೆ ಯಾವುದೇ ಕಾರ್ಯಕ್ರಮ ಸಂಯೋಜನೆ ನಿಜಕ್ಕೂ ಸವಾಲಿನ ಕೆಲಸ.

ಕಾರ್ಯಕ್ರಮವನ್ನು ಪರದೆಯ ಮುಂದೆ ತರಲು ಹಲವು ಜನರು ಪರದೆಯ ಹಿಂದೆ ಕೆಲಸ ನಿರ್ವಹಿಸುತ್ತಾರೆ. ಮೊದಲು ಕಾರ್ಯಕ್ರಮದ ನೀಲನಕ್ಷೆ ತಯಾರಿಸಲಾಗುತ್ತದೆ, ನಂತರ ಕಾರ್ಯಕ್ರಮದ ಪ್ರಾಯೋಜಕರ ಹುಡುಗಾಟ. ಕಾರ್ಯಕ್ರಮ ನಡೆಸುವ ಜಾಗ, ಗುತ್ತಿಗೆ ಆಧಾರಿತ ಮಾರಾಟಗಾರರು, ಆಮಂತ್ರಣ ಪತ್ರಿಕೆ, ಅತಿಥಿಗಳನ್ನು ಕರೆ ತರಲು ಸಾರಿಗೆ ವ್ಯವಸ್ಥೆ ನೋಡಿಕೊಳ್ಳುವುದು– ಹೀಗೆ ಕಾರ್ಯಕ್ರಮದ ಪ್ರತಿಯೊಂದು ಹಂತವನ್ನು ಸೂಕ್ಷ್ಮವಾಗಿ ಮಾಡ ಬೇಕಾಗುತ್ತದೆ. ಕೆಲವೊಂದು ಬಾರಿ ಸಣ್ಣ ಸಂಸ್ಥೆಗಳಿಗೆ ಇದನ್ನು ಗುತ್ತಿಗೆ ಆಧಾರದಲ್ಲಿ ನೀಡಲಾಗುತ್ತದೆ.

ಇವೆಂಟ್ ಮ್ಯಾನೇಜ್‌ಮೆಂಟ್ ಕುರಿತು ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಅಲ್ಪಾವಧಿ ಕೋರ್ಸ್‌ಗಳೂ ಇವೆ. ಕೆಲವು ಪ್ರಸಿದ್ಧ ಕಾಲೇಜುಗಳು ಪೂರ್ಣ ಪ್ರಮಾಣದ ಹಾಗೂ ಅಲ್ಪಾವಧಿಯ 6 ತಿಂಗಳ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸುತ್ತವೆ.

ಹೀಗೆ ಕೋರ್ಸ್ ನಡೆಸುವ ಕೆಲವು ಸಂಸ್ಥೆಗಳ ವಿವರ ಹೀಗಿವೆ:

★ ಹೈದರಾಬಾದ್‌ನ ರಾಮೋಜಿ ಅಂತರರಾಷ್ಟ್ರೀಯ ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆ–, 6 ತಿಂಗಳ ಡಿಪ್ಲೊಮಾ ಕೋರ್ಸ್.
★ ದೆಹಲಿ ವಿಶ್ವವಿದ್ಯಾಲಯದ ಸಮೂಹ ಸಂವಹನ ವಿಭಾಗವು ಒಂದು ವರ್ಷದ ಪೂರ್ಣ ಪ್ರಮಾಣದ ಕೋರ್ಸ್ ಆಯೋಜಿಸಿದೆ.
★ ಸಿದ್ಧಾರ್ಥ ಇನ್ ಸ್ಟಿಟ್ಯೂಟ್ ಮ್ಯಾನೇಜ್‌ಮೆಂಟ್, ಗ್ಯಾಂಗ್ಟಕ್.
★ ರಾಕ್ ಅಂಡ್ ರೋಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಮೊಹಾಲಿ
★ ಸರಸ್ವತಿ ವಿದ್ಯಾಪೀಠ, ಹರಿದ್ವಾರ.
★ ಪಯೊನೀರ್ಸ್ ಮೀಡಿಯಾ ಸ್ಕೂಲ್. 5ನೇ ಮಹಡಿ ಸೋನಾ ಟವರ್, ಮಿಲ್ಲರ್ಸ್ ರಸ್ತೆ ಬೆಂಗಳೂರು.
★ ಇಎಂಡಿಐ ಮ್ಯಾನೇಜ್‌ಮೆಂಟ್ ಸಂಸ್ಥೆ, ಬೆಂಗಳೂರು.
★ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ ಬೆಂಗಳೂರು.

ಇವೆಂಟ್ ಮ್ಯಾನೇಜ್‌ಮೆಂಟ್ ಕಂಪೆನಿಗಳಲ್ಲಿ ಉದ್ಯೋಗ ನಿರ್ವಹಿಸುವುದು ಆದಾಯದ ದೃಷ್ಟಿಯಿಂದಲೂ ಆಕರ್ಷಕ ಅನ್ನಿಸಿದೆ. ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗಳಲ್ಲಿ ಅರೆಕಾಲಿಕ ಕೆಲಸ ನಿರ್ವಹಿಸುವವರೂ ತಿಂಗಳಿಗೆ ರೂ.30,000 ರಿಂದ 50,000ದವರೆಗೆ ಹಣ ಗಳಿಸುವವರಿದ್ದಾರೆ. ಇಲ್ಲಿ ಮುಖ್ಯವಾಗಿ ನೀವು ಯಾವ ಇವೆಂಟ್ ಮಾಡುತ್ತೀರಿ ಅನ್ನುವುದರ ಮೇಲೆ ನಿಮ್ಮ ಸಂಭಾವನೆ ನಿಗದಿಯಾಗುತ್ತದೆ.

ಯಾವುದೇ ವ್ಯಕ್ತಿ ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ ಸೇರಿದರೆ ಮೊದಲು ಟ್ರೈನಿಯಾಗಿ ತೆಗೆದು ಕೊಳ್ಳಲಾಗುತ್ತದೆ, ನಂತರ ಅವರಿಗೆ ಸಂಯೋಜಕರಾಗಿ ಬಡ್ತಿ ನೀಡಲಾಗುವುದು. ಹೆಚ್ಚುತ್ತಿರುವ ಗ್ರಾಹಕೀಕರಣದಿಂದಾಗಿ ಇಂದು ಇವೆಂಟ್ ಮ್ಯಾನೇಜ್‌ಮೆಂಟ್ ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ. ಯುವಜನರಿಗೆ ಇಲ್ಲಿ ಹೆಚ್ಚು ಬೇಡಿಕೆ. ಶ್ರಮಪಟ್ಟು ದುಡಿಯುವುದು ಮುಖ್ಯ. ಕಾರ್ಯಕ್ರಮವೊಂದರ ಯಶಸ್ಸು ಇಲ್ಲಿ ತಂಡದ ನಿರ್ವಹಣೆಯ ಮೇಲಿರುತ್ತದೆ.

ಯಶಸ್ವಿ ಇವೆಂಟ್ ಸಂಯೋಜಕನಾಗಲು ಕೆಲವೊಂದು ಸೂತ್ರಗಳು:

★ ಕಾರ್ಯಕ್ರಮದ ಯಾವುದೇ ಹಂತದಲ್ಲಿ ಯಾವುದೇ ಸಮಸ್ಯೆ ಎದುರಾದರೂ ಧೈರ್ಯಗೆಡದೆ ತಾಳ್ಮೆಯಿಂದ ಕಾರ್ಯಕ್ರಮ ಮುಂದುವರಿಸುವ ಚಾತುರ್ಯ ಹೊಂದಿರಿ. ಸಮಸ್ಯೆಯನ್ನು ವಿಶ್ಲೇಷಿಸಿ ಪರಿಹಾರ ಕಂಡು ಹಿಡಿಯಿರಿ.
★ ವಿಭಿನ್ನ ಯೋಚನೆಯ ಗ್ರಾಹಕರು ಬರುವುದರಿಂದ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸೌಹಾರ್ದತೆಯಿಂದ ವರ್ತಿಸಿರಿ.
★ ಸಂಧಾನ ಕೌಶಲ್ಯ ಈ ವೃತ್ತಿಯಲ್ಲಿ ಬಹುಮುಖ್ಯ.
★ ಕೊನೆಯ ಕ್ಷಣದ ನಿರ್ಧಾರಗಳು ಹೆಚ್ಚು. ಕಡಿಮೆ ಅವಧಿಯಲ್ಲಿ ಹೆಚ್ಚು ವೇಗವಾಗಿ ಕೆಲಸ ಮಾಡಬೇಕಾಗುತ್ತದೆ. ಒತ್ತಡದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು.
★ ಸಂಘಟಿತ ಕಾರ್ಯವಾಗಿರುವುದರಿಂದ ಇಲ್ಲಿ 'ನಾನು' ಎನ್ನುವ ಅಂಶ ಬರಬಾರದು. ತಂಡದ ಪ್ರತಿಯೊಬ್ಬರಿಂದ ತಾಳ್ಮೆಯಿಂದ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ,
★ ಉತ್ತಮ ಸಂಪರ್ಕ ಬಹಳ ಮುಖ್ಯ. ಎಷ್ಟು ಹೆಚ್ಚು ಸಂಪರ್ಕ ಹೊಂದಿರುತ್ತಾರೋ ಅಷ್ಟೂ ಕೆಲಸ ಸುಲಭ. ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದುವುದು ಅಗತ್ಯ.